# ಬಿಸಿಲ ನಾಡಲಿ ತೆಂಗು ಕೃಷಿ



■ ಚಿತ್ರ–ಲೇಖನ:
**ಸಿದ್ದೇಶ್ ಸಣ್ಣಗಿರಿ, ಕೊಟ್ಟೂರು**

'ಇರಲಿ ಎಂದು ಹಾಕಿದ ಹತ್ತು ತೆಂಗಿನ ಗಿಡಗಳು ಮುಂದೊಮ್ಮೆ ತೆಂಗಿನ ತೋಟವಾಗಿ ಬದಲಾಗುವುದೆಂದು ಅಂದುಕೊಂಡಿರಲಿಲ್ಲ. ತೆಂಗಿನ ಗಿಡಗಳ ನಡುವೆ ತಿನ್ನಲು ಇರಲೆಂದು ಬೆಳೆಸಿದ ಗಿಡಗಳು ಆದಾಯ ತರುವ ಮರಗಳಾಗಿ ರೂಪುಗೊಳ್ಳುತ್ತವೆ ಎಂತಲೂ ಭಾವಿಸಿರಲಿಲ್ಲ.'

–ಇದು 82 ವಸಂತಗಳನ್ನು ಪೂರೈಸಿರುವ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹಾರಕಭಾವಿ ಗ್ರಾಮದ ಕೃಷಿಕ ಆದಿಮನಿ ರೇವಣಸಿದ್ದಪ್ಪ ತಮ್ಮ ತೆಂಗು ಕೃಷಿಯ ಪ್ರಾರಂಭಿಕ ಹಂತವನ್ನು ನೆನೆಸಿಕೊಂಡು ಹೇಳಿದ ಮಾತುಗಳಿವು.

ಹೌದು! ಬರದ ನಾಡಿನಲ್ಲಿಯೂ, ಮಲೆನಾಡಿನ ತೆಂಗುಗಳು ಕಂಗೊಳಿಸುವಂತೆ ತಮ್ಮ 15 ಎಕರೆ ಜಮೀನಿನಲ್ಲಿ ಅವರು ತೆಂಗಿನ ತೋಟ ಬೆಳೆಸಿದ್ದಾರೆ. ಬಾನೆತ್ತರಕ್ಕೆ ಬೆಳೆದಿರುವ ಮರಗಳು ನಿರಂತರ ಆದಾಯವನ್ನು ತಂದುಕೊಡುತ್ತಾ ಅವರ ಬಾಳಿಗೂ ಕಲ್ಪವೃಕ್ಷವಾಗಿ ನಿಂತಿವೆ.

## ಬೆಳೆದಿದ್ದು ಹೀಗೆ..

ಪ್ರಾರಂಭದಲ್ಲಿ ನೆಟ್ಟ ಹತ್ತು ಗಿಡಗಳು ನಳನಳಿಸುವಂತಾದಾಗ ರೇವಣಸಿದ್ದಪ್ಪ ಅವರಿಗೆ ಇಡೀ ಹದಿನೈದು ಎಕರೆಯಲ್ಲಿ ತೆಂಗು ಬೆಳೆಯುವ ಆಸೆ ಚಿಗುರೊಡೆ–ಯಿತು. ಅವರ ಮಾತುಗಳಲ್ಲೇ ಕೇಳಿ: 'ತೆಂಗು ಕೃಷಿಕನನ್ನು ಕೈ ಬಿಡುವುದಿಲ್ಲ ಎಂದೆನಿಸಿದೆ. ಹಿಂದು ಮುಂದು ನೋಡದೆ ಹರಪನಹಳ್ಳಿ ತಾಲೂಕಿನ ಹರಾಳು

(57ನೇ ಪುಟ ನೋಡಿ)

